# ಕೃಷಿ ನಿರ್ದೇಶನಾಲಯ(ಯೋಜನೇತರ)ಮಾರ್ಗಸೂಚಿ

2009-10 ನೇ ಸಾಲಿನ ಆಯವ್ಯಯ ಅಂದಾಜು ಪುಸ್ತಕದ ಪ್ರಕಾರ ಕೃಷಿ ವಿಸ್ತರಣಾ ಯೋಜನೆಯಲ್ಲಿರುವ ಯೋಜನೆ ಮತ್ತು ಯೋಜನೇತರ ಘಟಕವನ್ನು ಕೃಷಿ ನಿರ್ದೇಶನಾಲಯ ಲೆಕ್ಕ ಶೀರ್ಷಿಕೆ 2401-00-001-1-01 ಯೋಜನೆಯೊಂದಿಗೆ ವಿಲೀನಗೊಳಿಸಲಾಗಿದೆ. ಆದ್ದರಿಂದ ಎಲ್ಲಾ ಘಟಕಗಳನ್ನು ಕೃಷಿ ನಿರ್ದಶನಾಲಯ (ಯೋಜನೆ ಮತ್ತು ಯೋಜನೇತರ) ಅಡಿ ಚಾಲ್ತಿ ಘಟಕಗಳೆಂದು ಪರಿಗಣಿಸುವುದು. ಆದರೆ 2009-10ನೇ ಸಾಲಿನಲ್ಲಿ ಕೂಡ ಕೃಷಿ ನಿರ್ದೇಶನಾಲಯ ಯೋಜನೆಯನ್ನು ರಾಜ್ಯ ವಲಯ ಕಾರ್ಯಕ್ರಮವಾಗಿ ಮುಂದುವರೆಸಲಾಗಿದೆ.

ರಾಜ್ಯದಾದ್ಯಂತ ವಿವಿಧ ಕೃಷಿ ಹವಾಗುಣ ವಲಯದಲ್ಲಿರುವ ರೈತರಿಗೆ ಕೃಷಿ ಹಾಗೂ ಕೃಷಿ ಆಧಾರಿತ ಇತರೆ ಉತ್ಪಾದನಾ ಚಟುವಟಿಕೆಗಳಿಗೆ ಸಂಬಂಧಿಸಿದ ಆಧುನಿಕ ತಂತ್ರಜ್ಞಾನ ಹಾಗೂ ಕೌಶಲ್ಯಗಳನ್ನು ನಿರಂತರವಾಗಿ ತಲುಪಿಸಿ ರೈತರ ಕ್ಷೇತ್ರಗಳಲ್ಲಿ ಅಳವಡಿಸಲು ಮನಗಾಣಿಸುವ ಮೂಲಕ ರಾಜ್ಯದ ಆಹಾರೋತ್ಪಾದನೆಯ ಗುರಿಯನ್ನು ಸಾಧಿಸುವುದು ಈ ಯೋಜನೆಯ ಮುಖ್ಯ ಉದ್ದೇಶ.

ಕೃಷಿ ತಂತ್ರಜ್ಞಾನ ಹಾಗೂ ಕೌಶಲ್ಯ ಭೋದನೆಯಲ್ಲಿ ಸಕ್ಷಮತೆಯನ್ನು ಹಾಗೂ ಆಧುನಿಕ ತಂತ್ರಜ್ಞಾನಗಳಲ್ಲಿ ವಿಸ್ತರಣಾ ಕಾರ್ಯಕರ್ತರಿಗೆ ಹಾಗೂ ಅಧಿಕಾರಿಗಳಿಗೆ ಪರಿಣತಿಯನ್ನು ಗಳಿಸಿಕೊಳ್ಳಲು ಹಿಂದಿನ ವರ್ಷಗಳಲ್ಲಿದ್ದಂತೆ ಈ ವರ್ಷ ಕೂಡ ಜಿಲ್ಲಾ ಮಟ್ಟದಲ್ಲಿ ದ್ವೈಮಾಸಿಕ ಕಾರ್ಯಗಾರವನ್ನು (ತಾಂತ್ರಿಕ ಕೃಷಿ ಕಾರ್ಯಾಗಾರ), ತಾಲ್ಲೂಕು ಮಟ್ಟದಲ್ಲಿ ಪಾಕ್ಷಿಕ ತರಬೇತಿ ಕಾರ್ಯಕ್ರಮಗಳನ್ನು ಹಾಗೂ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳಲ್ಲಿ ವಿಶೇಷ ತರಬೇತಿಗಳನ್ನು ಏರ್ಪಡಿಸಲು ಯೋಜಿಸಲಾಗಿದೆ.

2009-10 ನೇ ಸಾಲಿನಲ್ಲಿ ಕೂಡ ಹಿಂದಿನ ವರ್ಷಗಳಲ್ಲಿ ಅನುಷ್ಟಾನಗೊಳಿಸಿದ್ದಂತೆ ವಿವಿಧ ಹುದ್ದೆಗಳ ವೇತನ, ತುಟ್ಟಿ ಭತ್ಯ, ಇತರೆ ಭತ್ಯ, ಪ್ರಯಾಣ ವೆಚ್ಚಗಳು, ಕಛೇರಿ ವೆಚ್ಚಗಳು ಹಾಗೂ ವಾಹನ ನಿರ್ವಹಣೆ ಮುಂತಾದ ಘಟಕಗಳನ್ನು ಮುಂದುವರೆಸಲಾಗಿದೆ.

ಕೃಷಿ ನಿರ್ದೇಶನಾಲಯ ಯೋಜನೆ(ಯೋಜನೇತರ)ಲೆಕ್ಕ ಶೀರ್ಷಿಕೆಯಲ್ಲಿ 2009-10 ನೇ ಸಾಲಿಗೆ ನೀಡಿರುವ ಒಟ್ಟು ಅನುದಾನ, ಸೃಷ್ಟಿಸಲಾದ ಹುದ್ದೆಗಳ ವೇತನ, ತುಟ್ಟಿ ಭತ್ಯ, ಇತರೆ ಭತ್ಯ, ಪ್ರಯಾಣ ವೆಚ್ಚಗಳು, ಕಛೇರಿ ವೆಚ್ಚಗಳು,ದೂರವಾಣಿ ವೆಚ್ಚ, ವಿದ್ಯುತ್ ಮತ್ತು ನೀರಿನ ವೆಚ್ಚ, ಇಂಧನ ಮತ್ತು ತೈಲ ವೆಚ್ಚ ಮತ್ತು ತರಬೇತಿ ವೆಚ್ಚಗಳಿಗೆ ಜಿಲ್ಲಾವಾರು ಅನುದಾನ ಹಂಚಿಕೆಯನ್ನು ಪ್ರತ್ಯೇಕವಾಗಿ ಬಿಡುಗಡೆ ಮಾಡಲಾಗುತ್ತದೆ.

ಈ ಯೋಜನೆಗೆ ಸಂಬಂಧಿಸಿದಂತೆ ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವರದಿಯನ್ನು ಮಾರ್ಗಸೂಚಿಯ ಕೊನೆಯಲ್ಲಿ ನೀಡಿರುವ ಅನುಬಂಧದಲ್ಲಿ ಪ್ರತಿ ತಿಂಗಳು 10ನೇ ದಿನಾಂಕದೊಳಗಾಗಿ ಉಪ ಕೃಷಿ ನಿರ್ದೇಶಕರು(ರೈತ ಸಂಪರ್ಕ ಕೇಂದ್ರ) ಬೆಂಗಳೂರು ಇವರಿಗೆ ಕಳುಹಿಸಬೇಕು.

ಈ ಯೋಜನೆಯ ವಿವಿಧ ಘಟಕಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಮುಂದಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ.

1) ಇಲಾಖೆಯ ಎಲ್ಲಾ ಸಿಬ್ಬಂದಿ/ಅಧಿಕಾರಿಗಳು ತಮ್ಮ ಕೇಂದ್ರ ಸ್ಥಾನದಲ್ಲಿ ಕಡ್ಡಾಯವಾಗಿ ವಾಸಿಸುವುದು.

2) ಕೃಷಿ ಸಹಾಯಕರು/ಕೃಷಿ ಅಧಿಕಾರಿ/ಸಹಾಯಕ ಕೃಷಿ ಅಧಿಕಾರಿಗಳು ಕಡ್ಡಾಯವಾಗಿ ದಿನಚರಿ ಬರೆಯತಕ್ಕದ್ದು. ಪ್ರತಿ ವೇತನ ಬಟವಾಡೆಗೆ ಮುನ್ನ ದಿನಚರಿ ಬರೆಯದಿರುವ ಅವಧಿಯನ್ನು ಅನಧಿಕೃತ ಅವಧಿಯೆಂದು ಪರಿಗಣಿಸುವುದು ಮತ್ತು ವೇತನ ಸಂದಾಯಕ್ಕೆ ಅನರ್ಹ ಅವಧಿ ಎಂದು ಘೋಷಿಸತಕ್ಕದ್ದು.

## ತರಬೇತಿಗಳುಃ ಯೋಜನೇತರ ಲೆಕ್ಕ ಶೀರ್ಷಿಕೆ 2401-00-001-1-01
## ಉಪ ಲೆಕ್ಕ ಶೀರ್ಷಿಕೆ 015-ಪೂರಕ ವೆಚ್ಚಗಳು

### 1) ತಾಂತ್ರಿಕ ಕೃಷಿ(ದ್ವೈಮಾಸಿಕ) ಕಾರ್ಯಾಗಾರಗಳು

ತಾಂತ್ರಿಕ ಕೃಷಿ(ದ್ವೈಮಾಸಿಕ) ಕಾರ್ಯಾಗಾರಗಳನ್ನು ಏರ್ಪಡಿಸುವುದಕ್ಕೋಸ್ಕರ ಒಂದು ತಾಂತ್ರಿಕ ಕೃಷಿ ಕಾರ್ಯಾಗಾರಕ್ಕೆ ರೂ.500-00/- ರಂತೆ ವರ್ಷಕ್ಕೆ 3000/- ರೂ.ಗಳನ್ನು ತಾಂತ್ರಿಕ ಕೃಷಿ ಕಾರ್ಯಾಗಾರ ನಡೆದ ಪ್ರತಿ ಜಿಲ್ಲೆಗೆ ನಿಗದಿತಪಡಿಸಲಾಗಿರುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಈ ಹಣವನ್ನು ತರಬೇತಿಗೆ ಬೇಕಾದ ಎಲ್ಲಾ ಸಲಕರಣೆಗಳನ್ನು ಕೌಶಲ್ಯ ಪ್ರದರ್ಶನಕ್ಕೆ ಬೇಕಾದ ವಸ್ತುಗಳನ್ನು ಖರೀದಿಸಲು ತಾಂತ್ರಿಕ ಸಂದೇಶಗಳನ್ನು ಮುದ್ರಿಸಿ ಹಾಗೂ ವಿಶ್ವವಿದ್ಯಾಲಯದ ಪರಿಣಿತರಿಗೆ ಬೇಕಾದ ದೃಶ್ಯ ಶ್ರವಣ ಸಾಧನಗಳನ್ನು ತಯಾರಿಸಲು ಖರ್ಚು ಮಾಡುವುದು.

### 2) ಪಾಕ್ಷಿಕ ತರಬೇತಿಗಳು

ಜಿಲ್ಲಾ ಮಟ್ಟದ ಕಾರ್ಯಾಗಾರದಲ್ಲಿ ಚರ್ಚಿಸುವ ತಾಂತ್ರಿಕ ವಿಷಯಗಳನ್ನು ಕ್ಷೇತ್ರ ಕಾರ್ಯಕರ್ತರುಗಳಿಗೆ ತಲುಪಿಸುವ ಸಲುವಾಗಿ ಹಾಗೂ ಅವರುಗಳ ತಾಂತ್ರಿಕ ಜ್ಞಾನ ಹೆಚ್ಚಿಸಲು ಪಾಕ್ಷಿಕ ತರಬೇತಿಗಳನ್ನು ನಡೆಸಲಾಗುವುದು. ಪ್ರತಿ ಪಾಕ್ಷಿಕ ತರಬೇತಿಗೆ ರೂ.50-00 ಗಳನ್ನು ನಿಗದಿಪಡಿಸದ್ದು ಸದರಿ ಹಣವನ್ನು ತರಬೇತಿಗಾಗಿ ಅವಶ್ಯ ಸಾಧನಾ-ಸಾಮಗ್ರಿಗಳನ್ನು ಖರೀದಿಸಲು ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರುಗಳು ಖರ್ಚು ಮಾಡತಕ್ಕದ್ದು.

ಪಾಕ್ಷಿಕ ತರಬೇತಿ ಮತ್ತು ತಾಂತ್ರಿಕ ಕೃಷಿ(ದ್ವೈಮಾಸಿಕ) ಕಾರ್ಯಾಗಾರಗಳಿಗೆ ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಆಯಾ ತಿಂಗಳಿನಲ್ಲಿಯೇ ಉಪಯೋಗಿಸಬೇಕು. ಅವಶ್ಯವೆನಿಸಿದಲ್ಲಿ ಮೊದಲನೇ ತರಬೇತಿ/ಕಾರ್ಯಾಗಾರಕ್ಕಾಗಿ ಖರೀದಿಸುವಾಗ ಮುಂದಿನ ನಾಲ್ಕು ತಿಂಗಳ ಅವಧಿಗೆ ಬೇಕಾಗುವ ತರಬೇತಿ ಸಾಧನ-ಸಾಮಗ್ರಿಗಳನ್ನು ಒಂದೇ ಸಾರಿ ಖರೀದಿಸುವುದು.

### 3. ಕ್ಷೇತ್ರ ಪ್ರಯೋಗಗಳು(ಯೋಜನೇತರ ಲೆಕ್ಕ ಶೀರ್ಷಿಕೆ 2401-00-001-1-01 ಕೃಷಿ ನಿರ್ದೇಶನಾಲಯ) ಉಪ ಲೆಕ್ಕ ಶೀರ್ಷಿಕೆ 015-ಪೂರಕ ವೆಚ್ಚಗಳು

ರೂಪಾಯಿ 1.00 ಲಕ್ಷ ಗಳ ಅನುದಾನವನ್ನು 2009-10 ನೇ ಸಾಲಿನಲ್ಲಿ ಕ್ಷೇತ್ರ ಪ್ರಯೋಗಗಳ ಕಾರ್ಯಕ್ರಮಕ್ಕಾಗಿ ಇತ್ಯರ್ಥವಾದ ತಕ್ಷಣ ಉಪ ಕೃಷಿ ನಿರ್ದೇಶಕರು( ಕ್ಷೇತ್ರ ಪ್ರಯೋಗಗಳು) ಕೇಂದ್ರ ಕಛೇರಿ ಇವರಿಗೆ ತಪ್ಪದೇ ಕಳುಹಿಸಬೇಕು

### 4. ಜಿಲ್ಲಾ ಡಯಾಗ್ನಿಸ್ಟಿಕ್ ತಂಡದ ಜಂಟಿ ಪ್ರವಾಸ ಹಾಗೂ ವಸ್ತು ಸ್ಥಿತಿ ವರದಿ ತಯಾರಿಸುವುದು

ಜಿಲ್ಲಾ ಡಯಾಗ್ನಿಸ್ಟಿಕ್ ತಂಡಗಳನ್ನು ಪ್ರತಿ ವರ್ಷವೂ ಪುನರ್ ರಚಿಸಬೇಕಾಗಿದ್ದು 2009-10 ನೇ ಸಾಲಿನಲ್ಲಿ ತಂಡ ರಚಿಸುವ ಜವಾಬ್ದಾರಿಯನ್ನು ಆಯಾ ಜಿಲ್ಲ ಜಂಟಿ ಕೃಷಿ ನಿರ್ದೇಶಕರುಗಳಿಗೆ ವಹಿಸಿಕೊಡಲಾಗಿದೆ. ರಚಿಸಲಾದ ತಂಡಗಳ ಪಟ್ಟಿಯನ್ನು ತಂಡದಲ್ಲಿರುವ ಸದಸ್ಯರಿಗೆ ಹಾಗೂ ನಿರ್ದೇಶನಾಲಯಕ್ಕೆ ಕಳುಹಿಸಬೇಕು. ರಚಿಸಬೇಕಾಗಿರುವ ತಂಡದ ರಚನೆ ಈ ಕೆಳಗಿನಂತಿದೆ.

| | | |
|---|---|---|
| 1 | ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು | ತಂಡದ ಮುಖ್ಯಸ್ಥರು |
| 2 | ಜಿಲ್ಲೆಗೆ ಸಂಬಂಧಿಸಿದ ಕೃಷಿ ವಿಶ್ವವಿದ್ಯಾಲಯದವಿಸ್ತರಣಾ ಸಂಯೋಜಕರು | ಸದಸ್ಯರು |
| 3 | ಜಿಲ್ಲೆಗೆ ಸಂಬಂಧಿಸಿದ ಕೃಷಿ ವಿಶ್ವವಿದ್ಯಾಲಯದ ಮಾಸ್ಟರ್ ಟ್ರೇನರ್ಸ್ ಪೈಕಿ ಒಬ್ಬರು | ಸದಸ್ಯರು |
| 4 | ಕೃಷಿ ಶಾಸ್ತ್ರ ತಜ್ಞರು | ಸದಸ್ಯರು |
| 5 | ಸಸ್ಯ ಸಂರಕ್ಷಣಾ ತಜ್ಞರು | ಸದಸ್ಯರು |
| 6 | ತೋಟಗಾರಿಕೆ ತಜ್ಞರು | ಸದಸ್ಯರು |
| 7 | ತೋಟಗಾರಿಕೆ ಇಲಾಖೆ ಜಿಲ್ಲಾ ಮಟ್ಟದ ಅಧಿಕಾರಿ | ಸದಸ್ಯರು |
| 8 | ಸಹಾಯಕ ಕೃಷಿ ನಿರ್ದೇಶಕರು (ವಿತ) | ಸದಸ್ಯರು |

ಮುಂಗಾರು ಹಂಗಾಮು ಪ್ರಾರಂಭಕ್ಕೆ ಮುಂಚಿತವಾಗಿಯೇ ತಂಡವು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ರೈತರ ಮಟ್ಟದಲ್ಲಿ ನೂತನ ತಾಂತ್ರಿಕತೆ ಅಳವಡಿಕೆ ಬಗ್ಗ ಇರುವ ಅಡಚಣೆ ಮತ್ತು ಇತರೆ ಸಮಸ್ಯೆಗಳನ್ನು ಗುರುತಿಸಿ ಮುಂಗಾರು ಹಿಂಗಾರು ಹಾಗೂ ಬೇಸಿಗೆ 3 ಹಂಗಾಮಿಗೆ ಸೇರಿದಂತೆ ಒಂದು ವಸ್ತು ಸ್ಥಿತಿ ವರದಿಯನ್ನು ತಯಾರಿಸಿ ಕೇಂದ್ರ ಕಛೇರಿಗ ಜಂಟಿ ಕೃಷಿ ನಿರ್ದೇಶಕರು (ವಿಸ್ತರಣೆ ಮತ್ತು ತರಬೇತಿ) ಇವರಿಗೆ ಕಳುಹಿಸಬೇಕು.

ಮೇಲಾಧಿಕಾರಿಗಳು ತಮ್ಮ ಪ್ರವಾಸ ಕಾಲದಲ್ಲಿ ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ ಕೇಂದ್ರದ ಕಾರ್ಯ ವೈಖರಿ ಬಗ್ಗೆ ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡುವುದು ಹಾಗೂ ಯಾವುದಾದರೂ ಸಮಸ್ಯೆಗಳಿದ್ದಲ್ಲಿ ಕೃಷಿ ಆಯುಕ್ತರ ಗಮನಕ್ಕೆ ತರುವುದು.

## 2009-10ನೇ ಸಾಲಿನ ಕೃಷಿ ನಿರ್ದೇಶನಾಲಯ (ಯೋಜನೇತರ)ಅನುದಾನ ಹಂಚಿಕೆಯ ಪಟ್ಟಿ

## ಲೆಕ್ಕ ಶೀರ್ಷಿಕೆ 2401-00-001-1-01 ಉಪ ಲೆಕ್ಕ ಶೀರ್ಷಿಕೆ 015-ಪೂರಕ ವೆಚ್ಚಗಳು

(ಆರ್ಥಿಕಃ ರೂ.ಗಳಲ್ಲಿ)

| ಕ್ರ. ಸಂ. | ಜಿಲ್ಲೆ | ಪಾಕ್ಷಿಕ ತರಬೇತಿ | | ತಾಂತ್ರಿಕ ಕೃಷಿ(ದ್ವೈಮಾಸಿಕ) ಕಾರ್ಯಾಗಾರ | | ಒಟ್ಟು ಆರ್ಥಿಕ |
|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | |
| 1 | ಬೆಂಗಳೂರು (ನ) | 96 | 4800 | 0 | 0 | 4800 |
| 2 | ಬೆಂಗಳೂರು (ಗ್ರಾ) | 96 | 4800 | 6 | 3000 | 7800 |
| 3 | ರಾಮನಗರ | 96 | 4800 | 0 | 0 | 4800 |
| 4 | ಕೋಲಾರ | 120 | 6000 | 0 | 0 | 6000 |
| 5 | ಚಿಕ್ಕಬಳ್ಳಾಪುರ | 144 | 7200 | 6 | 3000 | 10200 |
| 6 | ತುಮಕೂರು | 240 | 12000 | 6 | 3000 | 15000 |
| 7 | ಶಿವಮೊಗ್ಗ | 168 | 8400 | 6 | 3000 | 11400 |
| 8 | ಚಿತ್ರದುರ್ಗ | 144 | 7200 | 6 | 3000 | 10200 |
| 9 | ದಾವಣಗೆರೆ | 144 | 7200 | 6 | 3000 | 10200 |
| 10 | ಮೈಸೂರು | 168 | 8400 | 6 | 3000 | 11400 |
| 11 | ಚಾಮರಾಜನಗರ | 96 | 4800 | 6 | 3000 | 7800 |
| 12 | ಮಂಡ್ಯ | 168 | 8400 | 6 | 3000 | 11400 |
| 13 | ಕೊಡಗು | 72 | 3600 | 6 | 3000 | 6600 |
| 14 | ಹಾಸನ | 192 | 9600 | 6 | 3000 | 12600 |
| 15 | ಚಿಕ್ಕಮಗಳೂರು | 168 | 8400 | 6 | 3000 | 11400 |
| 16 | ದಕ್ಷಿಣ ಕನ್ನಡ | 120 | 6000 | 6 | 3000 | 9000 |
| 17 | ಉಡುಪಿ | 72 | 3600 | 0 | 0 | 3600 |
| 18 | ಧಾರವಾಡ | 120 | 6000 | 6 | 3000 | 9000 |
| 19 | ಗದಗ್ | 120 | 6000 | 6 | 3000 | 9000 |
| 20 | ಹಾವೇರಿ | 168 | 8400 | 6 | 3000 | 11400 |
| 21 | ಉ.ಕನ್ನಡ | 264 | 13200 | 6 | 3000 | 16200 |
| 22 | ಬೆಳಗಾಂ | 240 | 12000 | 6 | 3000 | 15000 |
| 23 | ರಾಯಚೂರು | 120 | 6000 | 6 | 3000 | 9000 |
| 24 | ಕೊಪ್ಪಳ | 96 | 4800 | 6 | 3000 | 7800 |
| 25 | ಬಳ್ಳಾರಿ | 168 | 8400 | 6 | 3000 | 11400 |
| 26 | ಗು ಲ್‌ಬರ್ಗಾ | 240 | 12000 | 6 | 3000 | 15000 |
| 27 | ಬಿಜಾಪುರ | 120 | 6000 | 6 | 3000 | 9000 |
| 28 | ಬಾಗಲಕೋಟೆ | 144 | 7200 | 6 | 3000 | 10200 |
| 29 | ಬೀದರ್ | 120 | 6000 | 6 | 3000 | 9000 |
| | **ಒಟ್ಟು** | **4224** | **211200** | **150** | **75000** | **286200** |

**ಸೂಚನೆಃ**

ಅನುದಾನ ಹಿಂದಿನ ಸಾಲಿಗಿಂತ ಹೆಚ್ಚಿಗೆ ನೀಡಿರುವ ಕಾರಣದಿಂದ ಹಾಗೂ ನಿಗದಿಪಡಿಸಿದ ದ್ವೈಮಾಸಿಕ ಕಾರ್ಯಾಗಾರ, ತಾಲ್ಲೂಕು ಮಟ್ಟದ ಪಾಕ್ಷಿಕ ತರಬೇತಿ ಶಿಬಿರ ಹಾಗೂ ಕ್ಷೇತ್ರ ಪ್ರಯೋಗಗಳಿಗೆ ನಿಗದಿಪಡಿಸಿದ ಮೊತ್ತ ಕಡಿಮೆ ಇರುವುದರಿಂದ ಸದರಿ ನಿಗದಿತ ಘಟಕಗಳಿಗೆ ಮೊತ್ತವನ್ನು ಹೆಚ್ಚಿಸುವಂತೆ ಚರ್ಚೆ ಹಂತದಲ್ಲಿದ್ದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಒಂದು ವೇಳೆ ಸರ್ಕಾರ ಒಪ್ಪಿದಲ್ಲಿ ಪೂರ್ಣ ಪ್ರಮಾಣದ ಅನುದಾನವಾದ ರೂ.7.47 ಲಕ್ಷಗಳನ್ನು ಬಳಸಿಕೊಳ್ಳಲಾಗುವುದು. 2009-10ನೇ ಸಾಲಿನ ಆಯವ್ಯಯದಲ್ಲಿ ರೂ.7.47 ಲಕ್ಷಗಳನ್ನು ನಿಗಧಿಪಡಿಸಲಾಗಿದೆ.

### ಕೃಷಿ ನಿರ್ದೇಶನಾಲಯ-ಲೆಕ್ಕ ಶೀರ್ಷಿಕೆ 2401-00-001-1-01(ಯೋಜನೇತರ)

### ಉಪ ಲೆಕ್ಕ ಶೀರ್ಷಿಕೆ 015- ಪೂರಕ ವೆಚ್ಚಗಳು

**ಆರ್ಥಿಕಃ ಲಕ್ಷ ರೂ.ಗಳಲ್ಲಿ**

| ಕ್ರ. ಸಂ | ಘಟಕ | ವಾರ್ಷಿಕ ಗುರಿ | | ಹಿಂದಿನ ತಿಂಗಳವರೆಗೆ ಸಾಧಿಸಿದ ಪ್ರಗತಿ | | ಈ ತಿಂಗಳು ಸಾಧಿಸಿದ ಪ್ರಗತಿ | | ಒಟ್ಟು ಪ್ರಗತಿ | | ಷರಾ |
|---|---|---|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | |
| 1 | ಪಾಕ್ಷಿಕ ತರಬೇತಿ | | | | | | | | | |
| 2 | ದ್ವೈಮಾಸಿಕ ಕಾರ್ಯಾಗಾರ | | | | | | | | | |
| 3 | ಕ್ಷೇತ್ರ ಪ್ರಯೋಗಗಳು | | | | | | | | | |
| **ಒಟ್ಟು** | | | | | | | | | | |

**ವಿ.ಸೂ.**ಯಾವುದೇ ಘಟಕದಲ್ಲಿ ಸಾಧಿಸಿದ ಪ್ರಗತಿ ಪ್ರತಿಶತ 75 ಕ್ಕಿಂತ ಕಡಿಮೆ ಇದ್ದರೆ ಷರಾ ಕಾಲಂ ನಲ್ಲಿ ವಿವರಣೆ ನೀಡಬೇಕು